Fax: 08282-256262
E-mail:kuvempuacademic@gmail.com

Phone No - 08282-256149
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

**Re-Accredited by NAC with "A" Grade, Ranked 73rd place in NIRF-2019 & 45th Place at National Level in SCIMAGO Rankings**

ಸಂಖ್ಯೆ:ಕುವಿ:ಶೈವಿ:ಎಸಿ–4(180ಎ): 1478 : 2019–20 ದಿನಾಂಕ:12–06–2019

## ಸುತ್ತೋಲೆ

ವಿಷಯ:– 2019–20 ನೇ ಶೈಕ್ಷಣಿಕ ಸಾಲಿನ ಪ್ರಥಮ ಹಾಗೂ ದ್ವಿತೀಯ ವರ್ಷದ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಕುರಿತು.

ಉಲ್ಲೇಖ:–1.ವಿಶ್ವವಿದ್ಯಾಲಯದ ಅಧಿಸೂಚನೆ ಸಂಖ್ಯೆ:ಕುವಿ:ಶೈವಿ:ಎಸಿ–4(180ಎ): 1336 : 2019–20 ದಿನಾಂಕ:10–06–2019.
2. ಸಂಖ್ಯೆ.ಕುವಿ:ಶೈವಿ:ಎಸಿ–4(180):3210:208–19 ದಿನಾಂಕ 4–8–2018.
3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ 10–6–2019.

* * * * *

2019–20 ನೇ ಶೈಕ್ಷಣಿಕ ಸಾಲಿನ ಪ್ರಥಮ ಹಾಗೂ ದ್ವಿತೀಯ ವರ್ಷದ ಸ್ನಾತಕೋತ್ತರ ಪದವಿಗಳ / ಸ್ನಾತಕೋತ್ತರ ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಾತಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸುತ್ತಾ, ಈ ಸಂಬಂಧ ಕೆಳಗಿನ ಮಾರ್ಗಸೂಚಿಗಳನ್ನು ನೀಡಲಾಗಿದ್ದು, ಅವುಗಳನ್ನು ಅನುಸರಿಸುವಂತೆ ತಿಳಿಸಲಾಗಿದೆ.

1. 2019–20 ನೇ ಶೈಕ್ಷಣಿಕ ಸಾಲಿನ ಪ್ರಥಮ ವರ್ಷದ ಪ್ರವೇಶಾತಿ ಆಯ್ಕೆ ಸಮಿತಿ ಅಧಿಸೂಚನೆಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ.
2. ಪ್ರವೇಶಾತಿ ನಿಯಮಗಳು ವಿವರಣಾ ಪುಸ್ತಕದ ಪುಟ ಸಂಖ್ಯೆ 30 ರಿಂದ 34ರವರೆಗೆ ಇರುವುದನ್ನು ಓದಿಕೊಳ್ಳತಕ್ಕದ್ದು. ಸ್ನಾತಕೋತ್ತರ ಪದವಿ ತರಗತಿಗಳಿಗೆ ವಿಶ್ವವಿದ್ಯಾಲಯದ ಪ್ರಚಲಿತ ನಿಯಮಗಳನುಸಾರ ಪ್ರವೇಶಾತಿ ನೀಡಬೇಕು. ಯಾವುದೇ ಕಾರಣಕ್ಕಾಗಿ ನಿಯಮವನ್ನು ಉಲ್ಲಂಘಿಸಬಾರದು.
3. ಪ್ರಥಮ ವರ್ಷಕ್ಕೆ ದಾಖಲಾಗುವ ವಿದ್ಯಾರ್ಥಿಗಳಿಂದ 2019–20 ನೇ ಶೈಕ್ಷಣಿಕ ಸಾಲಿನ ವಿವರಣಾ ಪುಸ್ತಕದ ಪುಟ ಸಂಖ್ಯೆ 24 ರಿಂದ 25 ರಲ್ಲಿರುವಂತೆ ಶುಲ್ಕಗಳನ್ನು ಪಾವತಿಸಿಕೊಳ್ಳುವುದು. ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಾತಿಗೆ ವಿವರಣಾ ಪುಸ್ತಕದ ಪುಟ ಸಂಖ್ಯೆ 26 ರಲ್ಲಿರುವಂತೆ ಪಾವತಿಸಿಕೊಳ್ಳುವುದು.
4. ಪೋಷಕರ ವಾರ್ಷಿಕ ವರಮಾನ ರೂ. 2,50,000/– ಕ್ಕಿಂತ ಕಡಿಮೆ ಇರುವ ಪ್ರವರ್ಗ–I ರ ಗುಂಪಿನ ಹಾಗೂ ರೂ. 1,00,000/– ಗಳಿಗಿಂತ ಕಡಿಮೆ ಇರುವ 2ಎ, 2ಬಿ, 3ಎ ಹಾಗೂ 3ಬಿ ಗುಂಪಿನ ವಿದ್ಯಾರ್ಥಿಗಳು ಸರ್ಕಾರದ ಆದೇಶ ಸಂಖ್ಯೆ:ಹಿಂವಿ 397 ಬಿಎಂಎಸ್ 2013 ಬೆಂಗಳೂರು, ದಿನಾಂಕ:05–09–2013 ರನ್ವಯ, ಶುಲ್ಕ ಪಟ್ಟಿ ಕಾಲಂ ಸಂಖ್ಯೆ 03 ರಲ್ಲಿರುವಂತೆ ಪೂರ್ಣ ಪ್ರಮಾಣದ ಶುಲ್ಕಗಳನ್ನು ಪಾವತಿ ಮಾಡತಕ್ಕದ್ದು ಹಾಗೂ ಈ ವರ್ಗದ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿಗಾಗಿ ಮೇಲ್ಕಂಡ ಸರ್ಕಾರದ ಪತ್ರದನ್ವಯ ನೀಡಿರುವ ನಮೂನೆಯಲ್ಲಿ ವಿಶ್ವವಿದ್ಯಾಲಯದ ಹಿಂದುಳಿದ ವರ್ಗಗಳ ಘಟಕಕ್ಕೆ ವಿಭಾಗಾಧ್ಯಕ್ಷರುಗಳ ಮೂಲಕ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.
5. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯದ ಮಿತಿಯನ್ನು ರೂ.2,50,000–00ಕ್ಕೆ ಮಿತಿಗೊಳಿಸಿದ್ದು, ಸದರಿ ವಿದ್ಯಾರ್ಥಿಗಳು ಪ್ರವೇಶಾತಿ ಸಮಯದಲ್ಲಿ ಜಾತಿ ಹಾಗೂ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು ಅಲ್ಲದೆ ಶುಲ್ಕ ವಿನಾಯಿತಿ ನಂತರ ನಿಗದಿಪಡಿಸಲಾದ ಶುಲ್ಕ ಪಟ್ಟಿ ಕಾಲಂ ಸಂಖ್ಯೆ 04 ರಲ್ಲಿರುವಂತೆ ಶುಲ್ಕಗಳನ್ನು ಪಾವತಿ ಮಾಡತಕ್ಕದ್ದು, ಶುಲ್ಕ ವಿನಾಯಿತಿ ಪಡೆದಿರುವ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿಗಾಗಿ ನಿಗದಿತ ನಮೂನೆಯಲ್ಲಿ ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಘಟಕಕ್ಕೆ ವಿಭಾಗಾಧ್ಯಕ್ಷರುಗಳ ಮೂಲಕ ಕಡ್ಡಾಯವಾಗಿ ಅರ್ಜಿ ಸಲ್ಲಿಸಲು ತಿಳಿಸಲಾಗಿದೆ.

--2

6. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ.2,50,000-00 ಕ್ಕಿಂತ ಅಧಿಕ ಆದಾಯವುಳ್ಳವರು ಸಾಮಾನ್ಯ ವಿದ್ಯಾರ್ಥಿಗಳಿಗೆ ಅನ್ವಯಿಸುವ ಅಂದರೆ ಶುಲ್ಕ ಪಟ್ಟಿ ಕಾಲಂ ಸಂಖ್ಯೆ 03 ರಲ್ಲಿರುವಂತೆ ಪೂರ್ಣ ಪ್ರಮಾಣದ ಶುಲ್ಕವನ್ನು ಪಾವತಿಸಬೇಕು.

7. ಅಧಿಸೂಚನೆ ಸಂಖ್ಯೆ:ಕುವಿ:ಶೈವಿ:ಎಸಿ-4/2287/2014-15, ದಿನಾಂಕ:28-07-2014ರನ್ವಯ, ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ನಿಗದಿತ ಪ್ರವೇಶ ಮಿತಿ ಭರ್ತಿಯಾಗದ ಸಂದರ್ಭಗಳಲ್ಲಿ ಕುವೆಂಪು ವಿಶ್ವವಿದ್ಯಾಲಯದ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದೇ ಇದ್ದ ಪಕ್ಷದಲ್ಲಿ ರಾಜ್ಯದ ಅನ್ಯ ವಿಶ್ವವಿದ್ಯಾಲಯಗಳ / ಹೊರ ರಾಜ್ಯದ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಅರ್ಜಿಗಳನ್ನು ಕುವೆಂಪು ವಿಶ್ವವಿದ್ಯಾಲಯದ ಸಾಮಾನ್ಯ ವರ್ಗದ ವಿದ್ಯಾರ್ಥಿಗಳೆಂದು ಪರಿಗಣಿಸಿ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ನಿಗದಿ ಪಡಿಸಿರುವ ಶುಲ್ಕಗಳನ್ನು ವಿಧಿಸಿ ಮೆರಿಟ್ ಆಧಾರದ ಮೇರೆಗೆ (ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನಿಯಮಾನುಸಾರ ಪ್ರವೇಶಾತಿ ಶುಲ್ಕದಲ್ಲಿ ವಿನಾಯಿತಿ ಇರುತ್ತದೆ). ಖಾಲಿ ಉಳಿಯುವ ರಿಕ್ತ ಸ್ಥಾನಗಳನ್ನು ಭರ್ತಿ ಮಾಡಿಕೊಳ್ಳತಕ್ಕದ್ದು.

8. ವಿಶ್ವವಿದ್ಯಾಲಯದ ಮೆರಿಟ್ ಕಮ್ ಪೇಮೆಂಟ್ ಕೆಟಗರಿಯಲ್ಲಿ ನಿಗದಿ ಪಡಿಸಲಾದ **ಎಂಪ್ಲಾಯಿಸ್ ಕೋಟಾದಡಿ ಪ್ರವೇಶಾತಿ ಮಾಡಿಕೊಳ್ಳುವ ಪೂರ್ವದಲ್ಲಿ ಕುಲಸಚಿವರಿಂದ ಸೇವಾ ದೃಢೀಕರಣ ಪತ್ರವನ್ನು** ಪಡೆಯುವುದು ಕಡ್ಡಾಯವಾಗಿರುತ್ತದೆ ಹಾಗೂ ವಿಶ್ವವಿದ್ಯಾಲಯವು ನಿಗದಿಪಡಿಸಿದ ರಿಯಾಯಿತಿ ಪ್ರಕಾರ ಶುಲ್ಕವನ್ನು ಪಾವತಿಸಿಕೊಳ್ಳುವುದು.

9. ವಿದೇಶದ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳುವಾಗ ಅಂತಹ ವಿದ್ಯಾರ್ಥಿಗಳು ಮೊದಲು ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರವನ್ನು (Eligibility Certificate) ಪಡೆಯಬೇಕು. ಅರ್ಹತಾ ಪ್ರಮಾಣ ಪತ್ರವನ್ನು ಪಡೆದ ನಂತರವೇ ಪ್ರವೇಶ ಮಾಡಿಕೊಳ್ಳತಕ್ಕದ್ದು.

10. ನಿಯಮಗಳನುಸಾರ ಅರ್ಹರಾದ ವಿದ್ಯಾರ್ಥಿಗಳು ಮಾತ್ರ ಪ್ರವೇಶ ಪಡೆದಿದ್ದಾರೆಂದು ದೃಢಪಡಿಸಿಕೊಳ್ಳುವ ಜವಾಬ್ದಾರಿ ವಿಭಾಗದ ಮುಖ್ಯಸ್ಥರದ್ದಾಗಿರುತ್ತದೆ.

11. ಸ್ನಾತಕೋತ್ತರ ಕೋರ್ಸುಗಳ 2ನೇ ವರ್ಷಕ್ಕೆ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಂದ ವಿವರಣಾ ಪುಸ್ತಕದಲ್ಲಿರುವಂತೆ ಪ್ರವೇಶಾತಿ ಶುಲ್ಕಗಳನ್ನು ಪಾವತಿಸಿಕೊಂಡು ಪ್ರವೇಶ ಮಾಡಿಕೊಳ್ಳುವುದು.

    **ಅ) ದಂಡ ರಹಿತ ಕೊನೆಯ ದಿನಾಂಕ:07-08-2019**

    **ಆ) ರೂ. 200/-ರ ದಂಡ ಶುಲ್ಕದೊಂದಿಗೆ ಕೊನೆಯ ದಿನಾಂಕ:14-08-2019.**

12. ಪ್ರವೇಶಾತಿ ಪಡೆಯುವ ಎಲ್ಲಾ ಸ್ನಾತಕೋತ್ತರ ವಿದ್ಯಾರ್ಥಿಗಳು ಶುಲ್ಕವನ್ನು **ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಜ್ಞಾನ ಸಹ್ಯಾದ್ರಿ ಶಾಖೆ, ಶಂಕರಘಟ್ಟ ಕೇಂದ್ರದಲ್ಲಿಯೇ** ಪಾವತಿಸುವಂತೆ ತಿಳಿಸಲು ಸೂಚಿಸಲಾಗಿದೆ.

13. ಪ್ರವೇಶಾತಿಯ ನಂತರ ಯಾವುದಾದರೂ ಕಾರಣಕ್ಕಾಗಿ ವಿದ್ಯಾರ್ಥಿಗಳು ಅವರುಗಳ ಪ್ರವೇಶಾತಿ ರದ್ದುಪಡಿಸಿಕೊಂಡಲ್ಲಿ ವಿಶ್ವವಿದ್ಯಾಲಯಕ್ಕೆ ಪಾವತಿಸಿರುವ ಶುಲ್ಕಗಳ ಮರುಭರಿಕೆಗೆ ಶುಲ್ಕಮರುಭರಿಕೆ ಹುಂಡಿ, ಹಾಜರಾತಿ ತ:ಖ್ತೆ ಮತ್ತಿತರ ದಾಖಲಾತಿಗಳೊಂದಿಗ ಯು.ಜಿ.ಸಿ. ನಿಯಮಗಳನುಸಾರ ಕ್ರಮಕೈಗೊಳ್ಳುವುದು.

14. 2019-20 ನೇ ಶೈಕ್ಷಣಿಕ ವರ್ಷದ ಸ್ನಾತಕೋತ್ತರ ತರಗತಿಗಳು **ದಿನಾಂಕ:01-08-2019ರಿಂದ** ಪ್ರಾರಂಭಗೊಳ್ಳುತ್ತವೆ.

15. ಯು.ಜಿ.ಸಿ. ನಿಯಮಾನುಸಾರ 75% ಹಾಜರಾತಿ ಕಡ್ಡಾಯವಾಗಿರುತ್ತದೆ. ಹಾಜರಾತಿ ಕಡಿಮೆ ಬಂದಲ್ಲಿ ವಿಶ್ವವಿದ್ಯಾಲಯವು ನಿಯಮಾನುಸಾರ ಕ್ರಮಕೈಗೊಳ್ಳಬಹುದೆಂಬ ಬಗ್ಗೆ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಬರೆಯಿಸಿಕೊಳ್ಳಬೇಕು ಹಾಗೂ ವಿಶ್ವವಿದ್ಯಾಲಯ ಬಯಸಿದಾಗ ದಾಖಲೆಗಳನ್ನು ತಪ್ಪದೇ ಹಾಜರುಪಡಿಸತಕ್ಕದ್ದು.

16. ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಪ್ರವೇಶಾನುಮೋದನೆಯನ್ನು ಪರೀಕ್ಷಾ ವಿಭಾಗದ ಸಾಫ್ಟ್‌ವೇರ್‌ನಲ್ಲಿ ತಮ್ಮ ವಿಭಾಗ/ಕಾಲೇಜಿಗೆ ನೀಡಿದ ಯುಸರ್ ನೇಮ್ ಬಳಸಿಕೊಂಡು ಆನ್‌ಲೈನ್ ಮೂಲಕ ಸಾಫ್ಟ್‌ವೇರ್‌ನಲ್ಲಿ ನಮೂದಿಸಿ ವಿವಿಧ ನಮೂನೆಗಳಲ್ಲಿರುವಂತೆ ಅಂಕಿ ಅಂಶಗಳೊಂದಿಗೆ ಯಂತ್ರಾಂಶ(ಹಾರ್ಡ್‌ವೇರ್) ಮತ್ತು ತಂತ್ರಾಂಶ(ಸಾಫ್ಟ್‌ವೇರ್)ದೊಂದಿಗೆ ದಾಖಲಾತಿಗಳನ್ನು ಶೈಕ್ಷಣಿಕ ವಿಭಾಗಕ್ಕೆ ಸಲ್ಲಿಸಿ ದಿನಾಂಕ 31-08-2019ರೊಳಗಾಗಿ ಪ್ರವೇಶಾನುಮೋದನೆಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಉಲ್ಲೇಖ (2) ನ್ನು ಗಮನಿಸಲು ಸೂಚಿಸಲಾಗಿದೆ.

___.3

17. 2019-20 ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪ್ರವೇಶಾತಿಯ ವಿವರಣಾ ಪುಸ್ತಕವು ಈಗಾಗಲೇ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು ಮಾಹಿತಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಿಂದ ಪಡೆಯಬಹುದು.

ಮಾನ್ಯ ಕುಲಸಚಿವರ ಅನುಮೋದನೆಯಾಗಿದೆ

ಉಪಕುಲಸಚಿವರು

ಉಪ ಕುಲಸಚಿವ
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ.

ಗೆ.

1. ಎಲ್ಲಾ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು / ಸಂಯೋಜನಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ / ಶಿವಮೊಗ್ಗ / ಕಡೂರು / ಚಿಕ್ಕಮಗಳೂರು.
2. ನಿರ್ದೇಶಕರು, ಕುವೆಂಪು ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, ಕಡೂರು, ಚಿಕ್ಕಮಗಳೂರು ಜಿಲ್ಲೆ.
3. ನಿರ್ದೇಶಕರು, ಕುವೆಂಪು ವಿಶ್ವವಿದ್ಯಾಲಯ, ಸ್ನಾತಕೋತ್ತರ ಕೇಂದ್ರ, (IDSG ಸರ್ಕಾರಿ ಕಾಲೇಜು ಆವರಣ) ಚಿಕ್ಕಮಗಳೂರು.
4. ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ.
5. ಪ್ರಾಂಶುಪಾಲರು, ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಶಿವಮೊಗ್ಗ.
6. ಪ್ರಾಂಶುಪಾಲರು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ.
7. ಸಂಯೋಜನಾಧಿಕಾರಿಗಳು, ಯು.ಸಿ.ಸಿ.ಎಫ್. ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
8. ಆಪ್ತ ಸಹಾಯಕರು, ಕುಲಪತಿಗಳು : ಕುಲಸಚಿವರು : ಕುಲಸಚಿವರು(ಪರೀಕ್ಷಾಂಗ) : ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9. ಕಛೇರಿ ಪ್ರತಿ

Fax: 08282-256262
E-mail:kuvempuacademic@gmail.com

Phone No - 08282-256149
Website: www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

Re-Accredited by NAAC with "A" Grade, Ranked 73rd place in NIRF-2019 & 45th Place at National Level in SCIMAGO Rankings

ಸಂಖ್ಯೆ:ಕುವಿ:ಶೈವಿ:ಎಸಿ–4(180ಎ): 1479 : 2019–20 ದಿನಾಂಕ:12–06–2019

## ಸುತ್ತೋಲೆ

ವಿಷಯ: 2019–20 ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾಲಯದ ಸಂಲಗ್ನಗೊಂಡ ಕಾಲೇಜುಗಳಲ್ಲಿನ ಪ್ರಥಮ ಹಾಗೂ ದ್ವಿತೀಯ ವರ್ಷದ ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಕುರಿತು.

ಉಲ್ಲೇಖ:1. ಸಂಖ್ಯೆ.ಕುವಿ:ಶೈವಿ:ಎಸಿ–4(180):3210:208–19 ದಿನಾಂಕ 4–8–2018.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 10– 06–2019

---

ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯ ಸಂಲಗ್ನಗೊಂಡ ಸರ್ಕಾರಿ / ಖಾಸಗಿ ಆಡಳಿತ ಮಂಡಳಿಗಳ ಕಾಲೇಜುಗಳಲ್ಲಿನ ಪ್ರಥಮ ಹಾಗೂ ದ್ವಿತೀಯ ವರ್ಷದ ಸ್ನಾತಕೋತ್ತರ ಪದವಿ ಕೋರ್ಸ್‌ಗಳ 2019–20 ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದಂತೆ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಈ ಮೂಲಕ ತಿಳಿಸಲಾಗಿದೆ. ಈ ಸಂಬಂಧ ಕೆಳಗಿನ ಮಾರ್ಗಸೂಚಿಗಳನ್ನು ನೀಡಲಾಗಿದ್ದು, ಅವುಗಳನ್ನು ಅನುಸರಿಸುವಂತೆ ತಿಳಿಸಲಾಗಿದೆ.

1. ಈ ಹಿಂದಿನ ಶೈಕ್ಷಣಿಕ ಸಾಲಿನಂತೆಯೇ ಈ ವರ್ಷವು ಪ್ರಥಮ ವರ್ಷದ ಪ್ರವೇಶವನ್ನು ವಿಶ್ವವಿದ್ಯಾಲಯವು ಸರ್ಕಾರಿ ಕಾಲೇಜುಗಳಲ್ಲಿನ ಸ್ನಾತಕೋತ್ತರ ವಿಭಾಗಗಳಿಗೆ ನಿಗದಿಪಡಿಸಿದ ಪ್ರವೇಶಮಿತಿಯ ಎಲ್ಲಾ ಸ್ಥಾನಗಳನ್ನು ವಿಶ್ವವಿದ್ಯಾಲಯದಿಂದಲೇ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ ಆಯ್ಕೆಮಾಡಿ, ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಶುಲ್ಕವನ್ನು ಪಾವತಿಸಿಕೊಂಡು ವಿದ್ಯಾರ್ಥಿಗಳ ಆಯ್ಕೆ ಕುರಿತು Admission/ Demand Note ನೊಂದಿಗೆ ಮೂಲ ದಾಖಲಾತಿಗಳನ್ನು ಕಳುಹಿಸಲಾಗುವುದು. ಸದರಿ ವಿದ್ಯಾರ್ಥಿಗಳಿಂದ ಕಾಲೇಜಿಗೆ ಸಂಬಂಧಿಸಿದ ಶುಲ್ಕಗಳನ್ನು ಪಾವತಿಸಿಕೊಂಡು ಕಾಲೇಜುಗಳಲ್ಲಿ ಪ್ರವೇಶ ಮಾಡಿಕೊಳ್ಳುವುದು.
2. ಖಾಸಗಿ ಆಡಳಿತ ಮಂಡಳಿ ಕಾಲೇಜುಗಳಲ್ಲಿನ ಸ್ನಾತಕೋತ್ತರ ವಿಭಾಗಗಳಿಗೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯದಿಂದ ನಿಗದಿಪಡಿಸಿದ ಪ್ರವೇಶಮಿತಿಯಲ್ಲಿನ ಶೇ.50ರಷ್ಟು ಸ್ಥಾನಗಳಿಗೆ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದಿಂದಲೇ ಮೆರಿಟ್ ಹಾಗೂ ಮೀಸಲಾತಿ ಆಧಾರದ ಮೇಲೆ ಆಯ್ಕೆಮಾಡಿ ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಶುಲ್ಕವನ್ನು ಪಾವತಿಸಿಕೊಂಡು ವಿದ್ಯಾರ್ಥಿಗಳ ಆಯ್ಕೆ ಕುರಿತು Admission / Demand Note ನೊಂದಿಗೆ ಮೂಲ ದಾಖಲಾತಿಗಳನ್ನು ಕಳುಹಿಸಲಾಗುವುದು. ಸದರಿ ವಿದ್ಯಾರ್ಥಿಗಳಿಂದ ಕಾಲೇಜಿಗೆ ಸಂಬಂಧಿಸಿದ ಶುಲ್ಕ / ಕಾಲೇಜು ಅಭಿವೃದ್ಧಿ ಶುಲ್ಕಗಳನ್ನು ಪಾವತಿಸಿಕೊಂಡು ಕಾಲೇಜುಗಳಲ್ಲಿ ಪ್ರವೇಶ ಮಾಡಿಕೊಳ್ಳುವುದು (ಕಾಲೇಜು ಅಭಿವೃದ್ಧಿ ಶುಲ್ಕ ಕಲಾ ನಿಕಾಯದ ವಿಷಯಗಳಿಗೆ ರೂ. 2000/–, ವಾಣಿಜ್ಯ ನಿಕಾಯದ ವಿಷಯಗಳಿಗೆ ರೂ. 4000/–, ವಿಜ್ಞಾನ ನಿಕಾಯದ ವಿಷಯಗಳಿಗೆ ರೂ. 6000/–).
3. ಖಾಸಗಿ ಆಡಳಿತ ಮಂಡಳಿ ಕಾಲೇಜುಗಳಲ್ಲಿ ಉಳಿಯುವ ಶೇ.50ರಷ್ಟು ಸ್ಥಾನಗಳಿಗೆ ಸಂಬಂಧಿಸಿದಂತೆ ಆಡಳಿತ ಮಂಡಳಿಯು ಅಭ್ಯರ್ಥಿಗಳ ಪ್ರವೇಶಾತಿ ಪ್ರಕ್ರಿಯೆಗಳನ್ನು 31–07–2019 ರೊಳಗಾಗಿ ಪೂರ್ಣಗೊಳಿಸುವುದು. **ಸದರಿ ಪ್ರವೇಶಾತಿ ಪಟ್ಟಿಯನ್ನು ವಿಶ್ವವಿದ್ಯಾಲಯದ ಸಂಬಂಧಪಟ್ಟ ನಿಕಾಯದ ಡೀನರಿಂದ ಕಡ್ಡಾಯವಾಗಿ ಅನುಮೋದನೆ ಪಡೆದು ಪ್ರತಿಯನ್ನು ಶೈಕ್ಷಣಿಕ ವಿಭಾಗಕ್ಕೆ ದಿನಾಂಕ:05–08–2019ರೊಳಗಾಗಿ ಸಲ್ಲಿಸಲು ತಿಳಿಸಲಾಗಿದೆ.**
4. ಖಾಸಗಿ ಆಡಳಿತ ಮಂಡಳಿ ಕಾಲೇಜುಗಳಲ್ಲಿನ ಉಳಿದ ಶೇ.50ರಷ್ಟು ಸ್ಥಾನಗಳಿಗೆ ಸಂಬಂಧಿಸಿದಂತೆ ಆಡಳಿತ ಮಂಡಳಿಯು ಪ್ರವೇಶ ಮಾಡಿಕೊಂಡ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಶುಲ್ಕಗಳನ್ನು ಪಡೆದು ವಿಶ್ವವಿದ್ಯಾಲಯದ ಸಾಮಾನ್ಯ ಖಾತೆಗೆ ಜಮಾ ಮಾಡುವುದು (**ಎಸ್.ಬಿ.ಐ. ಸಾಮಾನ್ಯ ಖಾತೆ ಸಂಖ್ಯೆ:54023036291**).
5. ವಿದೇಶದ ವಿದ್ಯಾರ್ಥಿಗಳನ್ನು ಪ್ರವೇಶ ಮಾಡಿಕೊಳ್ಳುವಾಗ ಅಂತಹ ವಿದ್ಯಾರ್ಥಿಗಳು ಮೊದಲು ವಿಶ್ವವಿದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರವನ್ನು (Eligibility Certificate) ಪಡೆಯಬೇಕು. ಅರ್ಹತಾ ಪ್ರಮಾಣ ಪತ್ರವನ್ನು ಪಡೆದ ನಂತರವೇ ಪ್ರವೇಶ ಮಾಡಿಕೊಳ್ಳತಕ್ಕದ್ದು.

---2

6. ಸ್ನಾತಕೋತ್ತರ ಕೋರ್ಸುಗಳ 2ನೇ ವರ್ಷಕ್ಕೆ ಈ ಕೆಳಕಂಡ ದಿನಾಂಕದೊಳಗೆ ವಿದ್ಯಾರ್ಥಿಗಳ ಪ್ರವೇಶಾತಿ ಮಾಡಿಕೊಳ್ಳುವುದು. 2019-20 ನೇ ಶೈಕ್ಷಣಿಕ ಸಾಲಿನಲ್ಲಿ ನಿಗದಿಪಡಿಸಿರುವಂತೆ ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕಾದ ಶುಲ್ಕಗಳನ್ನು ವಿಶ್ವವಿದ್ಯಾಲಯದ ಸಾಮಾನ್ಯ ಖಾತೆಗೆ ಜಮಾ ಮಾಡುವುದು **(ಎಸ್.ಬಿ.ಐ. ಸಾಮಾನ್ಯ ಖಾತೆ ಸಂಖ್ಯೆ:54023036291).**

**ಅ) ದಂಡ ರಹಿತ ಕೊನೆಯ ದಿನಾಂಕ:07-08-**2019

**ಆ) ರೂ. 200/-ರ ದಂಡ ಶುಲ್ಕದೊಂದಿಗೆ ಕೊನೆಯ ದಿನಾಂಕ:14-08-**2019

7. ಪ್ರವೇಶಾತಿಯ ನಂತರ ಯಾವುದಾದರೂ ಕಾರಣಕ್ಕಾಗಿ ವಿದ್ಯಾರ್ಥಿಗಳು ಅವರುಗಳ ಪ್ರವೇಶಾತಿ ರದ್ದುಪಡಿಸಿಕೊಂಡಲ್ಲಿ ಪಾವತಿಸಿರುವ ಶುಲ್ಕಗಳ ಮರುಭರಿಕೆಗೆ ಶುಲ್ಕಮರುಭರಿಕೆ ಹುಂಡಿ, ಹಾಜರಾತಿ ತ:ಖ್ತೆ ಮತ್ತಿತರ ದಾಖಲಾತಿಗಳೊಂದಿಗೆ ಯು.ಜಿ.ಸಿ. ನಿಯಮಗಳನುಸಾರ ಕ್ರಮಕೈಗೊಳ್ಳುವುದು.

8. 2019-20ನೇ ಶೈಕ್ಷಣಿಕ ವರ್ಷದ ಸ್ನಾತಕೋತ್ತರ ತರಗತಿಗಳು **ದಿನಾಂಕ:01-08-**2019**ರಿಂದ** ಪ್ರಾರಂಭಗೊಳ್ಳುತ್ತವೆ.

9. ಯು.ಜಿ.ಸಿ. ನಿಯಮಾನುಸಾರ 75% ಹಾಜರಾತಿ ಕಡ್ಡಾಯವಾಗಿರುತ್ತದೆ. ಹಾಜರಾತಿ ಕಡಿಮೆ ಬಂದಲ್ಲಿ ವಿಶ್ವವಿದ್ಯಾಲಯವು ನಿಯಮಾನುಸಾರ ಕ್ರಮಕೈಗೊಳ್ಳಬಹುದೆಂಬ ಬಗ್ಗೆ ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಬರೆಯಿಸಿಕೊಳ್ಳಬೇಕು ಹಾಗೂ ವಿಶ್ವವಿದ್ಯಾಲಯ ಬಯಸಿದಾಗ ದಾಖಲೆಗಳನ್ನು ತಪ್ಪದೇ ಹಾಜರುಪಡಿಸತಕ್ಕದ್ದು.

10. ಪ್ರಥಮ ಸೆಮಿಸ್ಟರ್‌ಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಪ್ರವೇಶಾನುಮೋದನೆಯನ್ನು ಪರೀಕ್ಷಾ ವಿಭಾಗದ ಸಾಫ್ಟ್‌ವೇರ್‌ನಲ್ಲಿ ತಮ್ಮ ವಿಭಾಗ/ಕಾಲೇಜಿಗೆ ನೀಡಿದ ಯುಸರ್ ನೇಮ್ ಬಳಸಿಕೊಂಡು ಆನ್‌ಲೈನ್ ಮೂಲಕ ಸಾಫ್ಟ್‌ವೇರ್‌ನಲ್ಲಿ ನಮೂದಿಸಿ ವಿವಿಧ ನಮೂನೆಗಳಲ್ಲಿರುವಂತೆ ಅಂಕಿ ಅಂಶಗಳೊಂದಿಗೆ ಯಂತ್ರಾಂಶ(ಹಾರ್ಡ್‌ವೇರ್) ಮತ್ತು ತಂತ್ರಾಂಶ(ಸಾಫ್ಟ್‌ವೇರ್)ದೊಂದಿಗೆ ದಾಖಲಾತಿಗಳನ್ನು ಶೈಕ್ಷಣಿಕ ವಿಭಾಗಕ್ಕೆ ಸಲ್ಲಿಸಿ ದಿನಾಂಕ 31-08-2019ರೊಳಗಾಗಿ ಪ್ರವೇಶಾನುಮೋದನೆಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಉಲ್ಲೇಖ (1) ನ್ನು ಗಮನಿಸಲು ಸೂಚಿಸಲಾಗಿದೆ.

11. ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸುವುದು.

**12.** 2019-20 **ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪ್ರವೇಶಾತಿಯ ವಿವರಣಾ ಪುಸ್ತಕವು ಈಗಾಗಲೇ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು ಮಾಹಿತಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಿಂದ ಪಡೆಯಬಹುದು.**

ಮಾನ್ಯ ಕುಲಸಚಿವರ ಅನುಮೋದನೆಯಾಗಿದೆ

ಉಪಕುಲಸಚಿವರು
**ಉಪ ಕುಲಸಚಿವ**
**ಶೈಕ್ಷಣಿಕ ವಿಭಾಗ,**
**ಕುವೆಂಪು ವಿಶ್ವವಿದ್ಯಾನಿಲಯ**
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ.

**ಗೆ,**

1. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಪೂಜಿ ನಗರ, ಶಿವಮೊಗ್ಗ.
2. ಪ್ರಾಂಶುಪಾಲರು, ಕಡಿದಾಳ್ ಮಂಜಪ್ಪ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪೋಸ್ಟ್ ಗ್ರಾಜುಯೇಟ್ ಸ್ಟಡೀಸ್ ಎ.ಟಿ.ಎನ್.ಸಿ. ಕಾಲೇಜು, ಶಿವಮೊಗ್ಗ.
3. ಪ್ರಾಂಶುಪಾಲರು, ಪಿ.ಇ.ಎಸ್. ಐ.ಎ.ಎಂ.ಎಸ್., ಸಾಗರ ರಸ್ತೆ, ಶಿವಮೊಗ್ಗ
4. ಪ್ರಾಂಶುಪಾಲರು,ಅಕ್ಷರ ನಿರ್ವಹಣಾ ಅಧ್ಯಯನ ಸಂಸ್ಥೆ, ಸವಳಂಗ ರಸ್ತೆ, ಶಿವಮೊಗ್ಗ.
5. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭದ್ರಾವತಿ.
6. ಪ್ರಾಂಶುಪಾಲರು, ಸರ್.ಎಂ.ವಿ. ಸರ್ಕಾರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಭದ್ರಾವತಿ.
7. ಪ್ರಾಂಶುಪಾಲರು, ಸರ್.ಎಂ.ವಿ. ಸರ್ಕಾರಿ ವಿಜ್ಞಾನ ಕಾಲೇಜು, ಭದ್ರಾವತಿ.
8. ಪ್ರಾಂಶುಪಾಲರು, ಶ್ರೀಮತಿ ಇಂದಿರಾಗಾಂಧಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಸಾಗರ.
9. ಪ್ರಾಂಶುಪಾಲರು, ಕೆ.ಹೆಚ್. ಶ್ರೀನಿವಾಸ್ ಸ್ನಾತಕೋತ್ತರ ಅಧ್ಯಯನ ಸಂಸ್ಥೆ, ಮಲೆನಾಡು ಅಭಿವೃದ್ಧಿ ಪ್ರತಿಷ್ಠಾನ, ಸಾಗರ.
10. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಕಾರಿಪುರ.
11. ಪ್ರಾಂಶುಪಾಲರು, ಕೊಡಚಾದ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸನಗರ.

12. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೀರ್ಥಹಳ್ಳಿ.
13. ಪ್ರಾಂಶುಪಾಲರು, ತುಂಗಾ ಮಹಾವಿದ್ಯಾಲಯ, ತೀರ್ಥಹಳ್ಳಿ.
14. ಎಜುರೇಟ್ ನಿರ್ವಹಣ ಅಧ್ಯಯನ ಕಾಲೇಜು, ಸವಳಂಗ ರಸ್ತೆ, ಶಿವಮೊಗ್ಗ.
15. ಪ್ರಾಂಶುಪಾಲರು, ಐ.ಡಿ.ಎಸ್.ಜಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಿಕ್ಕಮಗಳೂರು.
16. ಪ್ರಾಂಶುಪಾಲರು, ಎಂ.ಇ.ಎಸ್.. ಎಂ.ಎಸ್.ಪಿ.ಎಸ್. ಮಹಿಳಾ ಕಾಲೇಜು, ಚಿಕ್ಕಮಗಳೂರು.
17. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಡೂರು.
18. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ನರಸಿಂಹರಾಜಪುರ.
19. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊಪ್ಪ.

**ಪ್ರತಿಗಳು:**

1. ವಿಶ್ವವಿದ್ಯಾಲಯದ ಎಲ್ಲಾ ನಿಕಾಯದ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
2. ವಿಶ್ವವಿದ್ಯಾಲಯದ ಎಲ್ಲಾ ಶಾಲಾ ನಿರ್ದೇಶಕರುಗಳು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
3. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ವಿದ್ಯಾನಗರ, ಶಿವಮೊಗ್ಗ.
4. ಸಂಯೋಜನಾಧಿಕಾರಿಗಳು, ಯು.ಸಿ.ಸಿ.ಎಫ್. ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
5. ಆಪ್ತ ಸಹಾಯಕರು, ಕುಲಪತಿಗಳು : ಕುಲಸಚಿವರು : ಕುಲಸಚಿವರು(ಪರೀಕ್ಷಾಂಗ) : ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ.
6. ಕಛೇರಿ ಪ್ರತಿ.